# ಯೋಗ ಇದ್ದಷ್ಟೇ ಭೋಗ



**ಚಂಚಲಾ ವೇಣು**

ಕಲೆ: ಗಣೇಶ ಆಚಾರ್ಯ

ಗೆಳೆಯರಾದ ಸೀತಾಪತಿ ಮತ್ತು ರಾಮಾಚಾರಿ ಅಕ್ಕಪಕ್ಕದ ಮನೆಯ ಸಣ್ಣ ರೈತರು; ತಲಾ ಒಂದೆಕರೆ ಭೂಮಿಯಲ್ಲಿ ದುಡಿಯುತ್ತಿದ್ದರು. ಇಬ್ಬರಿಗೂ ಬಡತನದ ಜೀವನ ಸಾಕಾಗಿತ್ತು. ಹೇಗಾದರೂ ಮಾಡಿ ಹಣ ಸಂಪಾದನೆ ಮಾಡಬೇಕೆಂದು ಕನಸು ಕಂಡಿದ್ದರು.

ಒಮ್ಮೆ ಸೀತಾಪತಿ, ‘ಪಕ್ಕದ ಕಾಡಲ್ಲಿ ನಿಧಿ ಇದೆಯಂತೆ. ಹಿಂದೆ ಇದ್ದ ರಾಜರ ಪಾಳುಬಿದ್ದ ಅರಮನೆಯಲ್ಲಿ ಚಿನ್ನ, ವಜ್ರ, ಬೆಳ್ಳಿ ಎಲ್ಲಾ ರಾಶಿ ರಾಶಿ ಇದೆಯಂತೆ’ ಎಂದಾಗ ರಾಮಾಚಾರಿ ಆಸೆಯಿಂದ, ‘ಹಾಗಾದರೆ ನಡಿ, ನೋಡೋಣ. ಆದರೆ, ಅದಕ್ಕಿಂತ ಮುಖ್ಯವಾಗಿ ಆ ನಿಧಿಯ ಬಗ್ಗೆ ಇನ್ನಷ್ಟು ಮಾಹಿತಿ ತಿಳಿದುಕೊ’ ಎಂದ.

ಅದರಂತೆ ಸೀತಾಪತಿ ಅಂದು ರಾತ್ರಿ ತನ್ನ ತಂದೆಯಿಂದ ಉಪಾಯವಾಗಿ ಈ ವಿಷಯದ ಬಗ್ಗೆ ಹೆಚ್ಚಿನ ಮಾಹಿತಿ ತಿಳಿದುಕೊಂಡ. ಊರ ಹೊರಗೆ ಇರುವ ಮಹಾನದಿಯನ್ನು ದಾಟಿ ಹೋಗಬೇಕು. ಅನಂತರ ದಟ್ಟ ಕಾಡಿನಲ್ಲಿ ಸುಮಾರು ದೂರ ನಡೆದ ಮೇಲೆ ಅಲ್ಲೊಂದು ಪಾಳು ಬಿದ್ದ ಅರಮನೆ ಸಿಗುತ್ತದೆ. ಅದರಲ್ಲಿ ಸಾಕಷ್ಟು ನಿಧಿ ಇದೆ ಎಂಬ ಸಂಗತಿ ತಿಳಿಯಿತು.

ಹೇಗಾದರೂ ಮಾಡಿ ಅಲ್ಲಿಗೆ ಹೋಗಿ ಆ ನಿಧಿ ತಂದರೆ ಇಬ್ಬರ ಕಷ್ಟಗಳೂ ತೀರುತ್ತವೆ ಎಂದು ಗೆಳೆಯರು ಮಾತಾಡಿಕೊಂಡರು. ಮರುದಿನ ಇಬ್ಬರೂ ಮನೆಯಲ್ಲಿ ಏನೋ ಕಾರಣ ಹೇಳಿ ಹದಿನೈದು ದಿನಕ್ಕಾಗುವಷ್ಟು ಆಹಾರ, ಚೀಲಗಳು ಹಾಗೂ ಹಗ್ಗಗಳನ್ನು ತೆಗೆದುಕೊಂಡು ನಿಧಿ ಹುಡುಕುತ್ತಾ ಹೊರಟರು.

ತುಂಬಾ ದೂರ ನಡೆದ ಮೇಲೆ ಮಹಾನದಿ ಸಿಕ್ಕಿತು. ರಭಸದಿಂದ ಯಾವಾಗಲೂ ಮೈತುಂಬಿ ಹರಿಯುತ್ತಿದ್ದ ಆಳವಾದ ನದಿ ಅದು. ಒಂದು ಸಣ್ಣ ದೋಣಿಯನ್ನು ಬಾಡಿಗೆಗೆ ಪಡೆದರು. ಆ ದೋಣಿಯನ್ನು ಕೊಟ್ಟವನು, ‘ಯಾವುದೇ ಕಾರಣಕ್ಕೂ ಹೆಚ್ಚು ಭಾರ ಹಾಕಬೇಡಿ. ಈ ದೋಣಿ ಹೆಚ್ಚು ಭಾರವನ್ನು ತಡೆಯುವುದಿಲ್ಲ’ ಎಂಬ ಎಚ್ಚರಿಕೆಯೊಂದಿಗೆ ದೋಣಿಯನ್ನು ಕೊಟ್ಟ.

ಅವರು ನದಿ ದಾಟಿ ದಡ ತಲುಪಿದರು. ಅಲ್ಲಿಂದ ದಟ್ಟವಾದ ಕಾಡಿನ ಮೂಲಕ ನಡೆಯಲು ಆರಂಭಿಸಿದರು. ಒಂದು ವಾರ ನಡೆದ ಅನಂತರ ಪಾಳುಬಿದ್ದ ಅರಮನೆಯೊಂದು ಸಿಕ್ಕಿತು. ಇಬ್ಬರೂ ಅರಮನೆ ಒಳಹೊಕ್ಕು ನೋಡಿದಾಗ ಎರಡು ದೊಡ್ಡ ಮರದ ಪೆಟ್ಟಿಗೆಗಳು ಮಣ್ಣಿನ ರಾಶಿಯಲ್ಲಿ ಸಿಕ್ಕವು. ಅದರ ಮುಚ್ಚಳ ತೆರೆಯುತ್ತಿದ್ದಂತೆ ಕಣ್ಣು ಕೋರೈಸಿತು!

ಚಿನ್ನ, ಬೆಳ್ಳಿ, ವಜ್ರ, ಮಾಣಿಕ್ಯದ ಒಡವೆಗಳ ರಾಶಿಯೇ ಅಲ್ಲಿತ್ತು. ಇಬ್ಬರೂ ಹಿಡಿಸಲಾರದ ಹಿಗ್ಗಿನಿಂದ ಕುಣಿದಾಡಿದರು. ಕೊನೆಗೆ ಅದನ್ನು ಎಂಟು ಚೀಲಗಳಲ್ಲಿ ತುಂಬಿಕೊಂಡು ಕಷ್ಟಪಟ್ಟು ನದೀ ದಡದವರೆಗೆ ಹಗ್ಗದಿಂದ ಎಳೆದು ತಂದರು.